**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**ಓ ಎಸ್ ನಂ. 72/2017 ಪಿ . ಡಬ್ಲುಃ 1**

**ದಿನಾಂಕಃ 25.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 4 ನೆ ಪ್ರತಿವಾದಿ ಪರ ವಕೀಲರು ಶ್ರೀ ಹೆಚ್ ಬಿ ಜಿ ವಕೀಲರಿಂದಃ</u>**

4 ನೆ ಮತ್ತು 3 ನೇ ಪ್ರತಿವಾದಿಗಳು ನನ್ನ ಅಕ್ಕಂದಿರು. 2 ನೆ ಪ್ರತಿವಾದಿ ನನ್ನ ಅಣ್ಣ. 1 ನೆ ಪ್ರತಿವಾದಿ ನನ್ನ ತಂದೆ. ದಾವಾ ಸ್ವತ್ತು ಸರ್ವೆ ನಂ. 27 ಹಳೇ ಗುಬ್ಬಿ ಗ್ರಾಮ. ದಾವಾ ಸ್ವತ್ತು 1 ನೇಪ್ರತಿವಾದಿಗೆ ಪಿರ್ತಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿ .ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ . ಅದೇ ರೀತಿ ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ . ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ದಾವಾ ಹಾಕುವ ಸಮಯದಲ್ಲಿ 12 ಲಕ್ಷ ರೂಗಳು ಇತ್ತು ಎಂದರೆ ಸರಿ .

ನಾನು ಮತ್ತು ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಭಾಗ ಮಾಡಿಕೊಂಡಿಲ್ಲ ಎ ಂದರೆ ಸರಿ . ದಾವಾ ಸ್ವತ್ತಿನಲಿ 4 ನೇ ಪ್ರತಿವಾದಿಗೂ ಮತ್ತು ನನಗೊ ಸಮಾನ ಹಕ್ಕು ಇದೆ ಎಂದರೆ ಸರಿ . 3 ಮತ್ತು 4 ನೇ ಪ್ರತಿವಾದಿಗಳು ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲ ಎಂದು ಯಾವುದೇ ದಾಖಲಾತಿ ಬರೆದುಕೊಟ್ಟಿಲ್ಲ ಎಂದರೆ ಸರಿ . 1 ನೇ ಪ್ರತಿವಾದಿಗೆ ಅನಾರೋಗ್ಯ ವಾದಾಗ 3 ಮತ್ತು 4 ನೇ ಪ್ರತಿವಾದಿಗಳು ಸಹ ನೋಡಿಕೊಳ್ಳುತ್ತಾರೇ ಎಂದರೆ ಸರಿ .

ದಾವಾ ಸ್ವತ್ತಿನ ಅಭಿವೃದ್ದಿಗಾಗಿ 3 ಮತ್ತು 4 ನೆ ಪ್ರತಿವಾದಿಗಳು ಸಹ ಖರ್ಚು ಮತ್ತು ಶ್ರಮ ಮಾಡಿದ್ದಾರೆ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ತೆಂಗಿನ ಮರಗಳು ಇವೆ ಮತ್ತು 2 ಎಕರೆ ಖಾಲಿ ಜಮೀನು ಇದೆ.ಸದರಿ ತೆಂಗಿನ ಮರಗಳನ್ನು ನಾನು ಮತ್ತು ಪ್ರತಿವಾದಿಗಳು ಬೆಳೆಸಿರುತ್ತೇವೆ ಎಂದರ ಸರಿ . 2004 ನೇ ಇಸವಿಯ ಮುಂಚೆ ನನಗೂ ಮತ್ತು 1 ಮತ್ತು 2 ನೇ ಪ್ರತಿವಾದಿಗಳ ಮದ್ಯೆ ಯಾವುದೇ ನೊಂದಾಯಿತ ವಿಭಾಗ ಅಥವಾ ದಾಖಲಾತಿಗಳು ಆಗಿರುವುದಿಲ್ಲ ಎಂದರೆ ಸರಿ .ನಾನು ಮತ್ತು 2 ನೇ ಪ್ರತಿವಾದಿ ಸೇರಿಕೊಂಡು ಈ ದಾವೆ ಹಾಕಿದ್ದೇವೆ ಎಂದರೆ ಸರಿ .

1 ನೇ ಪ್ರತಿವಾದಿಯ ತಂದೆ ಹಕ್ಕು ನಿವೃತ್ತಿ ಪತ್ರ ವನು 1 ನೇ ಪ್ರತಿವಾದಿಗೆ ಬರೆದುಕೊಟ್ಟ ಮೇರೆಗೆ ದಾವಾ ಸ್ವತ್ತು ಅವರ ಹೆಸರಿಗೆ ಬಂದಿತು ಎಂದರೆ ಸರಿ . 4 ನೇ ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ 1/5 ಭಾಗ ದ ಹಕ್ಕಿದೆ ಎಂದರೆ ಸರಿ . ನಾನು ಮತ್ತು 2 ನೇ ಪ್ರತಿವಾದಿ 3 ಮತ್ತು 4 ನೇ ಪ್ರತಿವಾದಿಗೆ ತೊಂದರೆ ಕೊಡಲು ಕೆಲವು ದಾಖಲಾತಿಗಳನ್ನು ಸೃಷ್ಟಿ ಸಿ ಈ ದಾವೆ ಹಾಕಿರುತ್ತೇವೆ ಎಂದರೆ ಸರಿ .4 ನೇ ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ 1/5 ಭಾಗ ಕೊಡಲು ನನ್ನ ಯಾವುದೇ ತಕರಾರು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**